ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ :– ಮಾನ್ಯ ಅಧ್ಯಕ್ಷರೆ, ವಿಧವಾ ವೇತನ ಪಡೆಯಲು ವಾರ್ಷಿಕ ಆದಾಯ 6 ಸಾವಿರ ರೂ.ಗಳನ್ನು ಮೀರಬಾರದು ಎಂದು ಇದೆ. ಸಂಧ್ಯಾ ಸುರಕ್ಷಾ ಯೋಜನೆ ಅಡಿಯಲ್ಲಿ ಫಲಾನುಭವಿಗಳಾಗಲು ವಾರ್ಷಿಕ ಆದಾಯ 20 ಸಾವಿರ ರೂ.ಗಳನ್ನು ಮೀರಬಾರದು ಎಂದು ಇದೆ. ವಿಧವಾ ವೇತನ ಪಡೆಯಲು ನಿಗದಿಪಡಿಸಿರುವ 6 ಸಾವಿರ ರೂ.ಗಳ ವಾರ್ಷಿಕ ಆದಾಯದ ಮಿತಿಯನ್ನು ಬದಲಾವಣೆ ಮಾಡಬೇಕೆಂದು ಆಗ್ರಹಿಸುತ್ತೇನೆ. ಈಗ ಉದ್ಯೋಗ ಖಾತ್ರಿ ಯೋಜನೆಯಲ್ಲಿ 100 ದಿವಸಗಳ ಕಾಲ ಕೆಲಸ ಮಾಡಿದರೆ, ಒಬ್ಬ ವ್ಯಕ್ತಿಗೆ 8,200 ರೂ.ಗಳ ವೇತನ ಸಿಗುತ್ತದೆ. ವಾರ್ಷಿಕ ಆದಾಯ ಮಿತಿಯನ್ನು 6 ಸಾವಿರ ರೂ.ಗಳಿಗೆ ನಿಗದಿಪಡಿಸಿರುವುದು ಅತಿ ಕಡಿಮೆ ಎನಿಸುತ್ತದೆ. ಆದ್ದರಿಂದ ದಯವಿಟ್ಟು ವಿಧವಾ ವೇತನ ಪಡೆಯಲು ಅರ್ಜಿ ಹಾಕುವವರಿಗೂ ಸಹ ವಾರ್ಷಿಕ ಆದಾಯ ಮಿತಿಯನ್ನು 20 ಸಾವಿರ ರೂ.ಗಳಿಗೆ ಏರಿಸಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರು ಪರಿಶೀಲಿಸಬೇಕೆಂದು ಕೋರುತ್ತೇನೆ.

ಶ್ರೀ ಜಿ.ಕರುಣಾಕರ ರೆಡ್ಡಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಾರ್ಷಿಕ ಆದಾಯದ ಮಿತಿ ಬಗ್ಗೆ ಇರುವ ವ್ಯತ್ಯಾಸದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಎಲ್ಲರಿಗೂ ಒಂದೇ ತರಹದ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಲು ಅಗತ್ಯ ಕ್ರಮಗಳನ್ನು ಜರುಗಿಸುತ್ತೇವೆಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಸುರೇಶ್ ಕುಮಾರ್ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] :– ಮಾನ್ಯ ಅಧ್ಯಕ್ಷರೆ, ದಿನಾಂಕ 13ನೇ ಜುಲೈ 2009ರಂದು 3ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :– ಮಂಡಿಸಲಾಯಿತು.

(ಅನುಬಂಧ – I)

3. <u>ಕಾರ್ಯದರ್ಶಿಯವರ ವರದಿ</u>

ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿ

ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ ಸಚಿವಾಲಯ :– ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :– ಮಂಡಿಸಲಾಯಿತು.

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರೆ, ಮೈಸೂರು ಘಟನೆ ಬಗ್ಗೆ ನಿಯಮ 69ರ ಮೇರೆಗೆ ಚರ್ಚಿಸಬೇಕೆಂದು ಇವತ್ತಿನ ಅಜೆಂಡಾದಲ್ಲಿದೆ. ಅದರ ಬಗ್ಗೆ ತಾವು ಚರ್ಚೆಯನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಸಿದ್ದರಾಮಯ್ಯ [ವಿರೋಧ ಪಕ್ಷದ ನಾಯಕರು] ;– ಹೌದು, ಅದು ಅಜೆಂಡಾದಲ್ಲಿದೆ. ಅದರ ಬಗ್ಗೆ ಚರ್ಚೆ ಮಾಡುತ್ತೇನೆ. ಅದಕ್ಕೆ ಮೊದಲು ರಸಗೊಬ್ಬರ ವಿಷಯಕ್ಕೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸ ಬಯಸುತ್ತೇನೆ.

ಅಧ್ಯಕ್ಷರು :– ಹಾಗಾದರೆ, ಅಜೆಂಡಾದಲ್ಲಿರುವ ನಿಯಮ 69ರ ಅಡಿಯಲ್ಲಿನ ವಿಷಯ ಹಾಗೇ ಉಳಿದು ಬಿಡುತ್ತದೆ.

ಶ್ರೀ ಸಿದ್ದರಾಮಯ್ಯ :– ಮೊದಲು ಇದನ್ನು ಪ್ರಸ್ತಾಪ ಮಾಡಿ, ನಂತರ ಅದನ್ನೂ ಕೂಡ ನಾವು ಚರ್ಚೆ ಮಾಡುತ್ತೇವೆ. ಅಜೆಂಡಾದಲ್ಲಿ ಬಂದಿರುವುದರಿಂದ, ಅದರ ಬಗ್ಗೆ ಕೂಡ ನಾವು ಚರ್ಚೆ ಮಾಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ [ಇಂಧನ ಸಚಿವರು] :– ಮಾನ್ಯ ಅಧ್ಯಕ್ಷರೆ, ಅವತ್ತು ನಿಲುವಳಿ ಸೂಚನೆ ಮಂಡಿಸಿ, ಮೈಸೂರು ಸೇರಿದಂತೆ ಇಡೀ ಕರ್ನಾಟಕ ರಾಜ್ಯದಲ್ಲಿ ಬಹಳ ಉದ್ವಿಗ್ನವಾದ ವಾತಾವರಣ ಇದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದರು. ಆ ಸಂದರ್ಭದಲ್ಲಿ ಪ್ರಶ್ನೋತ್ತರವನ್ನೂ ಕೂಡ ಪಕ್ಕಕ್ಕೆ ಸರಿಸಿ ತಕ್ಷಣ ಈ ವಿಷಯದ ಚರ್ಚೆಯನ್ನು ಕೈಗೆತ್ತಿಕ್ಕೊಳ್ಳಬೇಕೆಂಬ ಒತ್ತಾಯವನ್ನು ಅವರು ಮಾಡಿದ್ದರು. ಆಮೇಲೆ, ತಾವೆಲ್ಲರೂ ಅವರ ಮನಸ್ಸನ್ನು ಒಪ್ಪಿಸಿ, ಇವತ್ತಿಗೆ ಹಾಕಿದ್ದೀರಿ. ಆದರೆ ಇವತ್ತು ಮತ್ತೊಂದು ವಿಷಯವನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಅವತ್ತಿನ importance ಈಗ ಹೊರಟು ಹೋಗುತ್ತದೆ. ಮೈಸೂರು ಘಟನೆ ಬಗ್ಗೆ ಪ್ರಸ್ತಾಪಿಸಲು ತಾವು ಇವತ್ತು ಅವರಿಗೆ ಅವಕಾಶ ಕೊಟ್ಟಿದ್ದೀರಿ. ಈಗ ಅವರು ಇನ್ನೊಂದು subject ತೆಗೆದುಕೊಳ್ಳಲು ಹೊರಟಿದ್ದಾರೆ. ಹಾಗಾದರೆ ಅವತ್ತಿನ importance ಹೋಯಿತೇ? ಅದರ ಬಗ್ಗೆ ಈಗ seriousness ಇಲ್ಲವೇ? ಇವತ್ತಿನ ನಿಲುವಳಿ subject ಬೇರೆಯೇ? ಅವತ್ತಿಗೂ ಮತ್ತು ಇವತ್ತಿಗೂ ಏನಾದರೂ ವ್ಯತ್ಯಾಸವಗುತ್ತಿದೆಯೇ? ನಾಳೆ ಬೆಳಿಗ್ಗೆ ಇನ್ನೊಂದು ಪ್ರಶ್ನೆ ಉದ್ಭವವಾಗುತ್ತದೆ. ರಾಜ್ಯದಲ್ಲಿ ದಿನದಿನಕ್ಕೂ ಬೇರೆ ಬೇರೆ subjects ಬರುತ್ತಿರುತ್ತದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಅವತ್ತಿನ ನಿಲುವಳಿ ಸೂಚನೆಯನ್ನು ಹಾಗಾದರೆ ಸಮಾಧಾನಕ್ಕೆ ಪ್ರಸ್ತಾಪ ಮಾಡಿದರೋ? ಇದೆಲ್ಲಾ ಪ್ರಶ್ನೆಗಳು ಕರ್ನಾಟಕ ರಾಜ್ಯದ ಜನತೆಯಲ್ಲಿ ಉದ್ಭವವಾಗಿವೆ. ಮೈಸೂರಿನಲ್ಲಿ ನಡೆದ ಘಟನೆ ಬಗ್ಗೆ ಇವತ್ತು ಪ್ರಸ್ತಾಪಿಸಲು ತಾವು ಅವರಿಗೆ ಅವಕಾಶ ಕೊಟ್ಟಿದ್ದಿರಿ. ಅದನ್ನು

Question Hour ಪಕ್ಕಕ್ಕೆ ಸರಿಸಿ ತೆಗೆದುಕೊಳ್ಳಬೇಕೆಂದು ಅವತ್ತು ಹೇಳಿದ್ದಿರಿ. ಇವತ್ತು ಬೇರೆ subject ತೆಗೆದುಕೊಳ್ಳುತ್ತಿದ್ದೀರಿ. ನಾನು ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡಿಕೊಳ್ಳುವುದೆನೆಂದರೆ, ತಾವು ಒಂದು subjectಗೆ ಹೋಗುವುದು ಸೂಕ್ತವೆಂಬುದು ನನ್ನ ಭಾವನೆಯಾಗಿದೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಏಕೋ confusionನಲ್ಲಿ ಇದ್ದ ಹಾಗೆ ಕಾಣುತ್ತದೆ. ಎರಡನ್ನೂ ಕೂಡ adjournment motion ಮೂಲಕ move ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅದನ್ನು convert ಮಾಡಿದ್ದಾರೆ. ಎರಡನ್ನೂ convert ಮಾಡಿದ ಮೇಲೆ, ಯಾವುದು ಮೊದಲು ಎಂಬ ಪ್ರಶ್ನೆ ಬರುವುದಿಲ್ಲ. ರೊಟ್ಟಿ ಯಾವ ಮೂಲೆಯನ್ನು ಮುರಿದರೂ ಸಹ ಮೊದಲನೆಯದೇ ಆಗಿರುತ್ತದೆ. ರೈತರಿಗೆ ಸಂಬಂಧಪಟ್ಟಿರುವುದೂ ಸಹ ಮಹತ್ವವಾದುದು. ಏಕೆಂದರೆ, ಈಗ ಬಿತ್ತನೆ ಕಾರ್ಯಕ್ರಮ ನಡೆಯುತ್ತಿದೆ. ಮಳೆ ಬರುತ್ತಿದೆ, ಗೊಬ್ಬರಗಳು ಸಿಗುತ್ತಿಲ್ಲ ಮಾನ್ಯ ಮಂತ್ರಿಗಳ ಕ್ಷೇತ್ರದಲ್ಲೇ ಗೊಬ್ಬರ ಸಿಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಸಗೊಬ್ಬರದ ಕೊರತೆ ಇದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಕಡೆಗೆ ಈ ಬಗ್ಗೆ ನಾವು ನೋಡುತ್ತಿದ್ದೇವೆ ಎಂದು ಅವರೇ ಹೇಳದ್ದಾರೆ. ಬಿತ್ತನೆ ವಿಚಾರ ಕೂಡ ಆದ್ಯತೆಯದ್ದೇ ಆಗಿದೆ. ನಾವು ಎಷ್ಟೇ ಹೇಳಿದರೂ ಕೂಡ ವ್ಯವಸಾಯದ ಬಗ್ಗೆ ನಾವು ಆದ್ಯತೆ ಕೊಡಬೇಕಾಗುತ್ತದೆ. ರೈತರ ಸಮಸ್ಯೆ ಮತ್ತು law and order problem ಎರಡೂ ಕೂಡ ಪ್ರಾಮುಖ್ಯವಾದದ್ದೇ ಆಗಿದೆ. ಎರಡೂ ಸಹ ರಾಜ್ಯದ ಜನತೆಗೆ ಸಂಬಂಧಪಟ್ಟಿದ್ದೇ. ಎರಡನ್ನೂ ಕೂಡ ನಾವು ಪ್ರಸ್ತಾಪ ಮಾಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುತ್ತಿರುವುದನ್ನು ನಾವೆಲ್ಲರೂ ಬಹಳ ಪ್ರಮುಖವಾಗಿ ಗಮನಿಸುತ್ತಿದ್ದೇವೆ. ಇಡೀ ಕರ್ನಾಟಕ ರಾಜ್ಯದ ಜನ ಗಮನಿಸುತ್ತಿದ್ದಾರೆ. Law and order failure ಆಗಿದೆ, ಮಾನ್ಯ ಗೃಹ ಮಂತ್ರಿಗಳು failure ಆಗಿದ್ದಾರೆ, ಎಂಬ ಅವತ್ತಿನ ನಿಮ್ಮ ಪ್ರಸ್ತಾವನೆಗಳನ್ನು ಗಮನಿಸಿದಾಗ, ನಿಜಕ್ಕೂ ಕೂಡ ಇಷ್ಟೊಂದು ಗಂಭೀರ ಪರಿಸ್ಥಿತಿ ಇದೆಯಾ ಎನ್ನುವಂತಹ ಅನುಮಾನ ನಮ್ಮೆಲ್ಲರಿಗೂ ಇತ್ತು. ನಾವೆಲ್ಲರೂ ಅಂದು, ಆ ಸ್ಥಿತಿ ಖಂಡಿತಾ ಇಲ್ಲ, ಪ್ರಶ್ನೋತ್ತರ ಮುಗಿಯಲಿ, ಸುಮ್ಮನೆ ನೀವು ಈ ರೀತಿ ಪ್ರಸ್ತಾಪ ಮಾಡುತ್ತಿದ್ದೀರಿ, ನೀವು ಬಹಳ exaggerate ಮಾಡುತ್ತಿದ್ದೀರಿ, ರಾಜ್ಯದ ಜನತೆಗೆ ಖಂಡಿತ ದಾರಿ ತಪ್ಪಿಸಬೇಡಿ ಎಂದು ಹೇಳಿದ್ದೆವು. ಈ subject ಬಿಟ್ಟು, ಬೇರೊಂದು subject ಬಗ್ಗೆ ನೀವು ಈಗ ಮಾತನಾಡುವುದಾದರೆ, ನಾವು ಅಂದು ಹೇಳಿದ್ದನ್ನು ನೀವು ಒಪ್ಪಿಕೊಂಡಂತಾಗುತ್ತದೆ. ಇವತ್ತು ಅವರು ಪ್ರಸ್ತಾಪ ಮಾಡುತ್ತಿರುವ ಅಂಶದ ಬಗ್ಗೆಯೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ಕೊಡುತ್ತಾರೆ.

ಅದರ ಬಗ್ಗೆ ನನ್ನ ಅಭ್ಯಂತರವಿಲ್ಲ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದ ಜನತೆ ಮುಂದೆ ನಗೆಪಾಟಲಿಗೆ ಈಡಾಗುತ್ತಿದ್ದಾರೆ, ಅವತ್ತು ಪ್ರಸ್ತಾಪ ಮಾಡಿದ ವಿಚಾರ

[ಗೊಂದಲ]

SRI. SIDDARAMAIAH :- No, No. I am Sorry.

[ಗೊಂದಲ]

ಶ್ರೀ ಕೆ.ಎಸ್.ಈಶ್ವರಪ್ಪ :– ನೀವು ಅವತ್ತು ಪ್ರಸ್ತಾಪಿಸಿದ್ದರ importance ಇವತ್ತು ಇಲ್ಲವೇ? ನೀವು 'ಇಲ್ಲ' ಎಂದು ಹೇಳುವುದಾದರೆ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

[ಗೊಂದಲ]

ಶ್ರೀ ಕೆ.ಎಸ್.ಈಶ್ವರಪ್ಪ :– ಅವತ್ತು ನಿಲುವಳಿ ಸೂಚನೆ ಅಡಿಯಲ್ಲಿ ನೀವು ಪ್ರಸ್ತಾಪಿಸಿದಂತಹ ವಿಷಯಕ್ಕೆ ಇವತ್ತು importance ಇಲ್ಲವೆಂದು ನೀವು ಹೇಳುವುದಾದರೆ, ಅದಕ್ಕೆ ನನ್ನದೇನೂ ತಕರಾರಿಲ್ಲ.

[ಗೊಂದಲ]

ಶ್ರೀ ಟಿ.ಬಿ.ಜಯಚಂದ್ರ :– ಈಗ ರಾಜ್ಯದ ಒಂದು ಕಡೆಯಲ್ಲಿ ಮಾತ್ರ law and order problem ಆಗಿದೆ. ಇಡೀ ರಾಜ್ಯದಲ್ಲಿ law and order problem ಆಗಬೇಕೆಂಬುದು ನಿಮ್ಮ ಉದ್ದೇಶವಾಗಿದೆಯೇ?

[ಗೊಂದಲ]

ಶ್ರೀ ಟಿ.ಬಿ.ಜಯಚಂದ್ರ :– ಯಾವುದಕ್ಕೆ weightage ಕೊಡಬೇಕು? ರಾಜ್ಯದ ರೈತರು

[ಗೊಂದಲ]

ಶ್ರೀ ಕೆ.ಎಸ್.ಈಶ್ವರಪ್ಪ :– ಅದಕ್ಕೆ weightage ಇಲ್ಲವೇ? ಹಾಗಿದ್ದರೆ, ಮೊನ್ನೆ ನಾವು ಹೇಳಿದ್ದು ಸತ್ಯವೆಂದು ನೀವು ಒಪ್ಪಿಕೊಂಡಂತಾಯಿತು.

[ಗೊಂದಲ]

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಿಮ್ಮ ನಾಯಕರು ಮಾತನಾಡುವಾಗ ನೀವೆಲ್ಲಾ ಏಕೆ ಎದ್ದು ನಿಲ್ಲುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರು ಏನು ತಕರಾರು ಎತ್ತಿದ್ದಾರೆ, ಆ ಬಗ್ಗೆ ನಾನು ಅವತ್ತೇ ಮೈಸೂರಿನಲ್ಲಿ ನಡೆದಂತಹ ಗಲಭೆ ಬಹಳ ಮಹತ್ತರವಾದುದು, ಅದನ್ನು ಬೇರೆ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ತೆಗೆದುಕೊಳ್ಳಬೇಕೆಂದು ವಾದ

ಮಾಡಿದೆ. ನಾವು ಪ್ರಿಲಿಮಿನರಿ ಸಬ್ಮಿಷನ್ ಕೂಡ ಮಾಡಿದೆವು. ಮಾನ್ಯ ಅಧ್ಯಕ್ಷರು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿ ನಿಯಮ 69 ಕ್ಕೆ ಕನ್ವರ್ಟ್ ಮಾಡಿದ್ದಾರೆ. ಅವತ್ತು ಚರ್ಚೆ ಮಾಡಲಿಕ್ಕೆ ಸಮಯ ಸಿಗಲಿಲ್ಲ. ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಅವತ್ತು ಕೂಡ 9ನೇ ತಾರೀಖು ಅಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಇದೆ, ಉದ್ವಿಗ್ನತೆ ಇದೆ, ಒಂದೆರಡು ದಿನ ಬಿಟ್ಟು ತೆಗೆದುಕೊಳ್ಳಿ ಎಂದು ಅವರು ಕೂಡ ಮನವಿ ಮಾಡಿದರು. ಆ ಹಿನ್ನಲೆಯಲ್ಲಿ ಮತ್ತು ಸಮಯದ ಅಭಾವ ಇದ್ದುದರಿಂದ ಅದನ್ನು ಬಿಟ್ಟಿದ್ದೇವೆ. ಅದಕ್ಕೆ ಮಹತ್ವ ಇಲ್ಲ ಎನ್ನುವ ಕಾರಣಕ್ಕೋಸ್ಕರವಾಗಿ ಅದನ್ನು ಬಿಟ್ಟಿರುವುದು ಅಲ್ಲ. ಇವತ್ತಿನ ಅಜೆಂಡಾದಲ್ಲಿ ನಿಯಮ 69 ಮೇಲೆ ಚರ್ಚೆ ಎಂದು ಇದೆ. ಇವತ್ತು ರಾಜ್ಯದಲ್ಲಿ ಗೊಬ್ಬರದ ಕೊರತೆ ಆಗಿ ರೈತರು ಎಲ್ಲಾ ಕಡೆ ಪ್ರತಿಭಟನೆ ಮಾಡುತ್ತಿದ್ದಾರೆ. ಗಲಾಟೆ ಮಾಡುತ್ತಿದ್ದಾರೆ, ಗೊಬ್ಬರ ಇಲ್ಲವೆಂದು ಹಾಹಾಕಾರ ಆಗಿದೆ. ಮಳೆ ತಡವಾಗಿ ಬಂದಿದೆ ಇನ್ನು ಕೆಲವು ಕಡೆ ಮಳೆ ಬಂದಿಲ್ಲ. ಕೆಲವು ಕಡೆ ಮಳೆ ಬಿದ್ದಿದೆ. ಮಳೆ ಬಿದ್ದಿರುವ ಕಡೆ ಗೊಬ್ಬರ ಇಲ್ಲವೆಂದು ಹಾವೇರಿ ಜಿಲ್ಲೆಯಲ್ಲಿ, ದಾವಣಗೆರೆ ಜಿಲ್ಲೆಯಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ರೈತರು ಗಲಾಟೆ ಮಾಡುತ್ತಿದ್ದಾರೆ. ಇದು ರೈತರ ಪ್ರಶ್ನೆ. ಅದಕೋಸ್ಕರ ಇದನ್ನು ಮತ್ತೆ ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿದೆವು. ಮಾನ್ಯ ಅಧ್ಯಕ್ಷರು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈಗ ನಮಗೆ ಪ್ರಿಲಿಮಿನರಿ ಸಬ್ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅದರ ಅರ್ಥ ಇವತ್ತು ಇರತಕ್ಕಂಥದ್ದಕ್ಕೆ ,ಮಹತ್ವ ಇಲ್ಲ, ಅಜೆಂಡಾದಲ್ಲಿ ಬಂದಿರತಕ್ಕಂಥದ್ದಕ್ಕೆ ಅವತ್ತು ಪ್ರಸ್ತಾಪ ಮಾಡಿರತಕ್ಕಂಥದ್ದಕ್ಕೆ ಮಹತ್ವ ಇಲ್ಲವೆಂದು ಅಲ್ಲ. ಅದಕ್ಕೂ ಕೂಡ ರಾಜ್ಯದ ಹಿತದೃಷ್ಟಿಯಿಂದ, ಜನತೆ ಹಿತದೃಷ್ಟಿಯಿಂದ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಅಲ್ಲಿ ಶಾಂತಿ ನೆಲೆಸಬೇಕೆಂಬ ದೃಷ್ಟಿಯಿಂದ ಅದಕ್ಕೂ ಕೂಡ ಮಹತ್ವ ಇದೆ. ಅದೂ ಜರೂರಾದ ವಿಚಾರವೇ. Parliamentary Affairs Ministerರವರು ಎರಡು ಮೂರು ದಿನ ಬಿಟ್ಟು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಅವತ್ತು ಸಲಹೆ ಕೊಟ್ಟಿದ್ದರು. ಸಮಯದ ಅಭಾವ ಕೂಡ ಬಂದಿತ್ತು. ಈ ಎಲ್ಲ ಹಿನ್ನಲೆಯಲ್ಲಿ ಇವತ್ತು ಅಜೆಂಡಾದಲ್ಲಿ ಬಂದಿದೆ ಹೊರತು, ಅವತ್ತು ನಾವು ಅದಕ್ಕೆ ಮಹತ್ವ ಇಲ್ಲವೆಂದು ಮುಂದಕ್ಕೆ ಹೋಗಿದ್ದು ಅಲ್ಲ. ಮಾನ್ಯ ಈಶ್ವರಪ್ಪನವರೇ, ನಾವು ಇನ್ನೊಂದು ವಿಚಾರವನ್ನು ಪ್ರತಿದಿನ ತರಬಾರದು ಎಂದು ಯಾವ ರೂಲ್‌ನಲ್ಲಿದೆ? ನಿಯಮ 69 ಕ್ಕೆ ಕನ್ವರ್ಟ್ ಆದರೆ, ಅದು ಇತ್ಯರ್ಥವಾಗಿ ಉತ್ತರ ಕೊಡುವವರೆಗೆ ಇನ್ನೊಂದು ಆರ್ಜೆಂಟ್ ಮ್ಯಾಟರ್ ಇದ್ದರೆ, ಜರೂರಾದ ವಿಚಾರ ಇದ್ದರು, ಅದನ್ನು ಪ್ರಸ್ತಾಪ ಮಾಡಬಾರದು ಎಂದು ನಾವು ಯಾವ ರೂಲ್‌ನಲ್ಲಿ ಬರೆದುಕೊಂಡಿದ್ದೇವೆ? ಇದನ್ನು ತಾವು ಗಮನಿಸಬೇಕು. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಅವರು ಹೇಳತಕ್ಕಂಥದ್ದಕ್ಕೆ ಯಾವುದೇ ಮಹತ್ವ ಇಲ್ಲ. ಇವತ್ತು ನನಗೆ ಅನುಮತಿ ಕೊಟ್ಟಿದ್ದೀರಿ, ಇವತ್ತು ಏನು

ನಾನು ನಿಲುವಳಿ ಸೂಚನೆ ಮೂಲಕ ತಂದಿದ್ದೇನೆ, ಅದು ನಿಮ್ಮ ಮುಂದೆ ಪ್ರಸ್ತಾಪ ಮಾಡುತ್ತೇನೆ, ಆ ಮೇಲೆ ನೀವು ಏನು ನಿರ್ಣಯ ಮಾಡುತ್ತೀರಿ ಅದರಂತೆ ನಡೆದುಕೊಳ್ಳುತ್ತೇವೆ. ಮಾನ್ಯ ಈಶ್ವರಪ್ಪನವರು ಪದೇ ಪದೇ ಎದ್ದು ನಗೆಪಾಟಲಾಗಿ ಬಿಡುತ್ತೇವೆಂದು ಹೇಳುತ್ತಾರೆ. ಯಾರು ನಗೆಪಾಟಲಾಗಿದ್ದಾರೆಂದು ಈ ದೇಶಕ್ಕೆ ಗೊತ್ತಿಲ್ಲವೋ? ಯಾರು ನಗೆಪಾಟಲಾಗಿದ್ದಾರೆಂದು ಅದರ ಬಗ್ಗೆ ಚರ್ಚೆ ಮಾಡೋಣ. ನಾನಾ, ನಿಮ್ಮ ಸರ್ಕಾರವೇ ಅಥವಾ ನೀವೇ ಎಂಬ ಬಗ್ಗೆ ಚರ್ಚೆ ಮಾಡೋಣ. ವಿರೋಧ ಪಕ್ಷದವರು ನಗೆಪಾಟಲಾಗಿಬಿಡುತ್ತಾರೆ. ಏನು ವಿರೋಧ ಪಕ್ಷದವರು ಅಂತ ಶೌರ್ಯ ತೋರಿಸುತ್ತಾರೆ. ಶೌರ್ಯ ತೋರಿಸುವುದು ಅಲ್ಲ ಇದು. ಹಕ್ಕಿನ ಪ್ರತಿಪಾದನೆ. ಜನರ ಸಮಸ್ಯೆಗಳನ್ನು ಪ್ರಸ್ತಾಪ ಮಾಡುವುದು. ಇಲ್ಲಿ lung power exhibit ಮಾಡುವುದಕ್ಕೆ ಅಲ್ಲ ಬಂದಿರುವುದು. ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದೀರಿ, ನಾನು ನಿಲುವಳಿ ಸೂಚನೆ ಬಗ್ಗೆ ಪ್ರಾಸ್ತಾವಿಕ ಪ್ರಸ್ತಾಪ ಮಾಡುತ್ತೇನೆ.

4. ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ಅನುಮತಿ ಕೋರಿಕೆ

ವಿಷಯ ; ರಾಜ್ಯದಲ್ಲಿ ಉಂಟಾಗಿರುವಂತಹ ಗೊಬ್ಬರದ ಸಮಸ್ಯೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಗೊಬ್ಬರದ ಅಭಾವೆ ಇದೆ ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗ ಜಿಲ್ಲೆಯಿಂದ ನಿನ್ನೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಯೂರಿಯಾ ಕೊರತೆ ಇದೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾಲ್ಕು ತರಹದ ಗೊಬ್ಬರಗಳನ್ನು ರೈತರು ವಿಶೇಷವಾಗಿ ಹೆಚ್ಚಿಗೆ ಬಳಸುತ್ತಾರೆ. ಒಂದು ಯೂರಿಯಾ, ಇನ್ನೊಂದು NPK ಮತ್ತು ಕಾಂಪೋಸ್ಟ್ ಗೊಬ್ಬರ ಹಾಗೂ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಹೆಚ್ಚಾಗಿ ಬಳಸುತ್ತಾರೆ. ಬಿತ್ತನೆ ಆದ ಮೇಲೆ ರೈತರು ಯಾವಾಗಲೂ first phaseನಲ್ಲಿ ಯೂರಿಯಾ ಬಳಸುತ್ತಾರೆ. First phaseನಲ್ಲಿ ಪೈರುಗಳಿಗೆ ಕೊಡತಕ್ಕಂತಹ ಗೊಬ್ಬರ ಯೂರಿಯ. ಅದು ಇವತ್ತು ರೈತರಿಗೆ ಎಲ್ಲಾ ಕಡೆ ಸಿಗಬೇಕು. ಇವತ್ತು ಇಡೀ ರಾಜ್ಯದಲ್ಲಿ ಬಿತ್ತನೆಗೆ ಮುಂಗಾರಿನಲ್ಲಿ ಸುಮಾರು 70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾವು ಮುಂಗಾರು ಬಿತ್ತನೆ ಮಾಡುತ್ತೇವೆಂದು ಕೃಷಿ ಇಲಾಖೆಯವರು ಅಂದಾಜು ಮಾಡಿ ಕೊಟ್ಟಿದ್ದಾರೆ. ಯಾವ ಯಾವ ಬೆಳೆಯನ್ನು ಮುಂಗಾರಿನಲ್ಲಿ ಹಾಕುತ್ತೇವೆಂದು ಕೂಡ ಕೃಷಿ ಇಲಾಖೆಯವರಿಗೆ ಗೊತ್ತು. ಯಾವ ಯಾವ ಸಂದರ್ಭದಲದಲ್ಲಿ, ಯಾವ ಯಾವ ಕಾಲಕ್ಕೆ, ಯಾವ ಯಾವ ಗೊಬ್ಬರ ರೈತರು ಬಳಸುತ್ತಾರೆ ಎನ್ನತಕ್ಕಂತಥದ್ದು ಕೂಡ ಕೃಷಿ ಇಲಾಖೆಯವರಿಗೆ ಗೊತ್ತಿದೆ. ಈಗಾಗಲೇ ಮಳೆ ಬೀಳುವುದು ಸ್ವಲ್ಪ ವಿಳಂಬವಾಗಿದೆ. ಕೆಲವು ಜಿಲ್ಲೆಗಳಲ್ಲಿ ಮಳೆ